ಇದೆ ಎಂದು ಮಾನ್ಯ ಸದಸ್ಯರ ಭಾವನೆಯಾದರೆ ಅಲ್ಲಿಗೆ ಒಂದು ಎಕ್ಸ್‌ಪರ್ಟ್ ಕಮಿಟಿಯನ್ನು ಕಳುಹಿಸಿ, ವರದಿಯನ್ನು ತರಿಸಿಕೊಂಡು, ರೋಗಿಗಳ ದಾಖಾಲಾತಿಗಳ ಮಾಹಿತಿಗಳನ್ನು ಪಡೆದು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲು ಯತ್ನ ಮಾಡುತ್ತೇನೆ.

ಅಧ್ಯಕ್ಷರು : ಚು.ಗು. ಪ್ರಶ್ನೆ ಕ್ರಮಾಂಕ : 104 (377) - ಶ್ರೀ ರೇವುನಾಯಕ್ ಬೆಳಮಗಿ- ಇವರ ಪ್ರಶ್ನೆಗೆ ಸರಕಾರದವರು ಸಮಯವನ್ನು ಕೇಳಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಸ್ಥಾಪನೆ

105 (680) ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

1) ಉತ್ತರ ಕನ್ನಡ ಜಿಲ್ಲೆಯಲ್ಲಿ ರಕ್ತ ನಿಧಿ ಬ್ಯಾಂಕ್ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ ರಕ್ತನಿಧಿ ಬ್ಯಾಂಕ್ ಸ್ಥಾಪಿಸಲು ಕೈಗೊಂಡ ಕ್ರಮಗಳೇನು?

3) ಎಂದು ಎಲ್ಲೆಲ್ಲಿ ಅಸ್ತಿತ್ವಕ್ಕೆ ತರಲಾಗುವುದು?

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ)

1) ಬಂದಿದೆ

2) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಲ್ಲಿ ಕಾರವಾರ ಜಿಲ್ಲಾ ಆಸ್ಪತ್ರೆ ಮತ್ತು ಸಿರಸಿ ಆಸ್ಪತ್ರೆಗಳಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪಿಸುವ ಪ್ರಸ್ತಾವನೆ ಸೇರಿದೆ.

3) ಕಾರವಾರ ಜಿಲ್ಲಾ ಆಸ್ಪತ್ರೆಯಲ್ಲಿ ರಕ್ತ ನಿಧಿ (ಬ್ಲಡ್ ಬ್ಯಾಂಕ್) ಸ್ಥಾಪನೆಗಾಗಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಕಟ್ಟಡ ನಿರ್ಮಿಸಲಾಗಿದ್ದು, ಇದಕ್ಕೆ ಬೇಕಾದ ಸಲಕರಣೆಗಳನ್ನು ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಿಂದ ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಿರಸಿ ಆಸ್ಪತ್ರೆಯಲ್ಲಿ ರಕ್ತ ನಿಧಿ ಕಟ್ಟಡ ನಿರ್ಮಾಣಕ್ಕಾಗಿ ವಾಸ್ತು ಶಿಲ್ಪಿಗಳನ್ನು ನೇಮಕ ಮಾಡಿದ್ದು, ತಯಾರಾದ ನಕ್ಷೆಗಳು ವಿಶ್ವಬ್ಯಾಂಕ್ ವಾಸ್ತು ಶಿಲ್ಪಿಗಳಿಂದ ಅನುಮೋದನೆಗೊಂಡಿದೆ. ಮುಂದಿನ ಅಗತ್ಯ ಕ್ರಮಕ್ಕಾಗಿ ಏರ್ಪಾಡು ಮಾಡಲಾಗುವುದು.

ಡಾ॥ ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ದಾರಿ (1) ನಮ್ಮ ಕರಾವಳಿ ಭಾಗದಲ್ಲಿ ಹಾಯ್ದು ಹೋಗುತ್ತದೆ. ಅದರಲ್ಲಿ ರಸ್ತೆ ಅಪಘಾತಗಳಿಂದಾಗಿ ರಕ್ತ ದೊರೆಯದೆ ಅನೇಕ ಸಾವು-ನೋವುಗಳು ಉಂಟಾಗುತ್ತಿವೆ. ಹಾಗೆಯೇ ಹೆರಿಗೆ ಸಂಬಂಧಪಟ್ಟ ಚಿಕಿತ್ಸೆ ಸೂಕ್ತ ರೀತಿಯಲ್ಲಿ ಬೇಕಾಗುವ ರಕ್ತ ದೊರೆಯುತ್ತಿಲ್ಲದ ಕಾರಣ ಅನೇಕ ಸಾವುನೋವುಗಳು ಉಂಟಾಗುತ್ತಿವೆ. ಕುಮಟಾ, ಹೊನ್ನಾವರ, ಭಟ್ಕಳ - ಈ ಮೂರು ಕಡೆಗಳಲ್ಲಿ ಸಾಧಾರಣವಾಗಿ 250 ರಿಂದ 300 ಹಾಸಿಗೆಗಳು ಇರತಕ್ಕಂಥ ನರ್ಸಿಂಗ್ ಹೋಂಗಳು ಇದ್ದಾವೆ. ಅಲ್ಲಿ ಎಕ್ಸ್‌ಪರ್ಟ್ಸ್ ಇದ್ದಾರೆ, ಸರ್ಜನ್ಸ್ ಇದ್ದಾರೆ, ಅವರಿಗೆ ಸರ್ಜರಿ ಮಾಡಬೇಕಾಗಿದ್ದರೂ ಕೂಡ ರಕ್ತ ಬೇಕಾಗುತ್ತದೆ. ಆದ್ದರಿಂದ ಹೊನ್ನಾವರದಲ್ಲಿ ಬ್ಲಡ್ ಬ್ಯಾಂಕ್‌ನ್ನು ಸ್ಥಾಪನೆ ಮಾಡಲು ತಾವು ಕ್ರಮ ಕೈಗೊಳ್ಳುತ್ತೀರಾ ಎಂದು ಕೇಳಬಯಸುತ್ತೇನೆ. ಅದು ಹೊನ್ನಾವರದಲ್ಲಿ ಸೆಕೆಂಡ್ ಫೇಸ್‌ಗೆ ಇದೆ. ಅದನ್ನು ಫಸ್ಟ್ ಫೇಸ್‌ಗೆ ತರಲು ಕಾರ್ಯ ಪ್ರವೃತ್ತರಾಗುತ್ತೀರೋ?

ಡಾ॥ ಹೆಚ್.ಸಿ. ಮಹಾದೇವಪ್ಪ : ಸುಪ್ರೀಂ ಕೋರ್ಟ್ 1997ರ ಡಿಸೆಂಬರ್‌ನಲ್ಲಿ ಪ್ರೊಫೆಷನಲ್ ಬ್ಲಡ್ ಡೊನೇಷನ್ಸ್‌ಗಳನ್ನು ಬಂದ್ ಮಾಡಿದ ಮೇಲೆ, ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ ರಾಜ್ಯದಲ್ಲಿ ಸುಮಾರು 35 ಬ್ಲಡ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈಗ ಪ್ರತಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಏಳು ಹೊಸ ಜಿಲ್ಲಾ ಕೇಂದ್ರಗಳಲ್ಲಿ ಕೂಡ ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ, ಕಾರವಾರದಲ್ಲಿ ಈಗಾಗಲೇ ಕಟ್ಟಡ ಪೂರ್ಣಗೊಂಡಿದ್ದು, ಸಿರ್ಸಿಯಲ್ಲಿ ಮಾಡುವುದಕ್ಕೆ ಕೇಂದ್ರ ಡ್ರಗ್ ಕಂಟ್ರೋಲರ್, ರಾಜ್ಯ ಡ್ರಗ್ ಕಂಟ್ರೋಲರ್ ಮತ್ತು ಇನ್ನೊಬ್ಬ ಎಕ್ಸ್‌ಪರ್ಟ್ಸ್ ಪ್ರತಿನಿಧಿ, ಈ ಮೂರು ಜನರ ಅಭಿಪ್ರಾಯವನ್ನು ಪಡೆದು ಅಲ್ಲಿ ಅಗತ್ಯವಿದೆಯೇ ಎಂಬುದನ್ನು ನೋಡಿ ಒಂದು ವರ್ಷದಲ್ಲಿ ಅಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆ. ಹೊನ್ನಾವರದಲ್ಲಿ ಅಗತ್ಯ ಇದೆಯೇ ಎಂಬುದು ಗೊತ್ತಿಲ್ಲ. ಈ ಎಕ್ಸ್‌ಪರ್ಟ್ಸ್ ಸಮಿತಿ ಅಲ್ಲಿಗೆ ಭೇಟಿ ನೀಡಿ ವರದಿ ಕೊಟ್ಟ ಮೇಲೆ ಅದನ್ನು ಪರಿಶೀಲಿಸಬಹುದು.

ಡಾ॥ ಎಂ.ಪಿ. ಕರ್ಕಿ : ಹೊನ್ನಾವರದಲ್ಲಿ ಸೆಕೆಂಡ್ ಫೇಸಿನಲ್ಲಿ ಇದೆ. ಫಸ್ಟ್ ಫೇಸ್‌ನಲ್ಲಿ ಕಾರವಾರದಲ್ಲಿ ಮಾತ್ರ ಇತ್ತು ಸಿರಸಿ ಮತ್ತು ಹೊನ್ನಾವರ ಸೆಕೆಂಡ್ ಫೇಸಿನಲ್ಲಿ ಇದೆ. ಅದನ್ನು ಫಸ್ಟ್ ಫೇಸಿಗೆ ತಂದರೆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಬ್ಲಡ್ ತರಲಿಕ್ಕೆ ಈಗ ಗೋವಾಕ್ಕೆ ಇಲ್ಲವೇ ಮಣಿಪಾಲಿಗೆ ಹೋಗಬೇಕಾಗಿದೆ. ಕಾರವಾರದಲ್ಲಿ ಸ್ಥಾಪನೆ ಮಾಡಿದರೂ ಭಟ್ಕಳದವರಿಗೆ 120 ಕಿಲೋ ಮೀಟರ್ ಆಗುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ : ಪರ್ಯಾಯ ವ್ಯವಸ್ಥೆ ಎಷ್ಟು ಸಾಧ್ಯವಿದೆ ಅಷ್ಟು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. 1, 2, 3, 4 ನೇ ಹಂತವೆನ್ನುವ ಪ್ರಶ್ನೆ ಇಲ್ಲ. ಎಲ್ಲವನ್ನೂ ಒಂದೇ ಪ್ರಮಾಣದಲ್ಲಿ ಮಾಡಲಿಕ್ಕೆ ನಮ್ಮ ಕೆ. ಹೆಚ್.ಎಸ್.ಡಿ.ಪಿ ಅಧಿಕಾರಿಗಳು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ಆರೋಗ್ಯ ಸುಧಾರಣೆಗೆ ಬಂದಂತಹ ಯೋಜನೆಗಳನ್ನು ನಮ್ಮ ರಾಜ್ಯವೇ ಮೊದಲನೆಯದಾಗಿ ಕೆಲಸ ಮಾಡಿದೆ ಎಂಬ ಪ್ರಶಂಸೆಯನ್ನು ಪಡೆದಿದ್ದಾರೆ. ಕಾರವಾರ ಸಿರಸಿಯಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಹೊನ್ನಾವರದಲ್ಲಿ ಇದರ ಅಗತ್ಯ ಇದೆಯೇ ಎಂಬ ಬಗ್ಗೆ ವರದಿ ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ.

ಮೊಳಕಾಲ್ಮೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

106 (675) ಶ್ರೀ ಎಸ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ, ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

1) ಹೌದು